ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಎಷ್ಟೋ ಕಡೆ ಹಾಸ್ಟೆಲಂಗಳಲ್ಲಿ ೧೦ ಜನ ವಿದ್ಯಾರ್ಥಿಗಳಿದ್ದು ೫೦ ಜನರ ಹೆಸರಿನಲ್ಲಿ ಗ್ರ್ಯಾಂಟ್ ತೆಗೆದುಕೊಳ್ಳುತ್ತಿದ್ದಾರೆ. ಬೋಗಸ್ ಹಾಸ್ಟಲುಗಳ ಹೆಸರುಗಳ ಮೇಲೆ ಹಣ ಪಡೆಯುತ್ತಿದ್ದಾರೆ. ಇಂಥ ಅಕ್ರಮ ನಮ್ಮಲ್ಲಿ ಇಲ್ಲ. ತಾವು ಒಂದು ವಿಶೇಷ ತಂಡವನ್ನು ಕಳುಹಿಸಿ ವಿಚಾರಣೆ ಮಾಡಿಸಿ. ಕಳೆದ ೫ ವರ್ಷದಿಂದ ಚೆನ್ನಾಗಿ ನಡೆದುಕೊಂಡು ಬಂದಿದ್ದರೆ ಗ್ರ್ಯಾಂಟ್ ಕೊಡಿ, ಇಲ್ಲದಿದ್ದರೆ ಬೇಡ.

ಶ್ರೀ ಜಿ. ಬಸವಣ್ಣಪ್ಪ.— ಸರ್ಕಾರದ ಉದ್ದೇಶ ವಿದ್ಯಾರ್ಥಿನಿಲಯಗಳನ್ನು ಪ್ರೋತ್ಸಾಹಿಸುವುದೇ ಆಗಿದೆ. ಪ್ರಸ್ತುತ ವರ್ಷ ೧೮೦ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳು. ೧೮೦ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯಗಳಿಗೆ ಸರ್ಕಾರ ಈಗಾಗಲೇ ಮಂಜೂರಾತಿ ನೀಡಿದೆ. ವಿದ್ಯಾರ್ಥಿನಿಲಯ ಚೆನ್ನಾಗಿ ನಡೆಯುತ್ತಿದ್ದು, ಜಿಲ್ಲಾ ಪರಿಷತ್‌ನಿಂದ ರೋವರ್ಟ್ ಬಂದರೆ ಗ್ರ್ಯಾಂಟನ್ನು ಮಂಜೂರು ಮಾಡಿಸಿ ಕೊಡುತ್ತೇನೆ. ಅವ್ಯವಹಾರ ನಡೆಸುತ್ತಿದ್ದ ಸುಮಾರು ೫೦-೬೦ ವಿದ್ಯಾರ್ಥಿನಿಲಯಗಳನ್ನು ರದ್ದು ಮಾಡಲಾಗಿದೆ. ಇಂಥ ವಿದ್ಯಾರ್ಥಿನಿಲಯಗಳ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಬಗರ್ ಹುಕುಂ ಜಮೀನಿನ ಹಂಚಿಕೆ

೧೨೭೮. **ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ)**.—**ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?**

ಅ) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ ಸರಕಾರಿ ಜಮೀನಿನ ವಿಸ್ತೀರ್ಣವೆಷ್ಟು ಹಾಗೂ ಯಾವ ಯಾವ ಊರಿನಲ್ಲಿದೆ.

ಆ) ಆ ಪೈಕಿ ಎಷ್ಟು ವಿಸ್ತೀರ್ಣದಲ್ಲಿ ಬಗರ್‌ಹುಕುಂ ಸಾಗುವಳಿಯಲ್ಲಿದೆ ಹಾಗೂ ಫಲಾನುಭವಿಗಳ ಸಂಖ್ಯೆ ಎಷ್ಟು.

ಇ) ಅವರು ಎಷ್ಟು ವರ್ಷಗಳಿಂದ ಸ್ವಾಧೀನಾನುಭವದಲ್ಲಿದ್ದಾರೆ ಹಾಗೂ ಆ ಪೈಕಿ ನಿಮ್ನ ವರ್ಗದವರು ಎಷ್ಟು ಮತ್ತು ಇತರೆಯವರು ಎಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ೧೦,೦೫೧ ಎಕರೆ ೩೬ ಗುಂಟೆ. ಗ್ರಾಮವಾರು ವಿವರಗಳ ಬಗ್ಗೆ ಪಟ್ಟಿ ಲಗತ್ತಿಸಲಾಗಿದೆ.

ಆ) ಆ ಪೈಕಿ ೫೯೯೦-೩೦ ಎಕರೆ ಸರ್ಕಾರಿ ಜಮೀನು ೩೧೫೭ ಜನ ಫಲಾನುಭವಿಗಳ ಬಗರ್ ಹುಕುಂ ಸಾಗುವಳಿಯಲ್ಲಿರುತ್ತದೆ.

ಇ) ಆ ಪೈಕಿ ಸದರಿ ಅನಧಿಕೃತ ಸಾಗುವಳಿದಾರರು ಸುಮಾರು ೬ ವರ್ಷಗಳಿಂದ ೧೫ ವರ್ಷಗಳ ಸ್ವಾಧೀನಾನುಭವದಲ್ಲಿರುತ್ತಾರೆ. ಇವರ ಪೈಕಿ ೧೪೫೫ ಜನ ನಿಮ್ನ ವರ್ಗದವರು ಮತ್ತು ೧೨೦೨ ಜನರು ಇತರೆಯವರಾಗಿರುತ್ತಾರೆ.